**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ81/2020 ಪಿ.ಡಬ್ಲ್ಯೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **03.03.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ 6** ನೇ ಪ್ರತಿವಾದಿ ಪರ ಶ್ರೀ ಎಸ್.ಜೆ ವಕೀಲರಿಂದಃ

ನನ್ನ ತಂದೆಯವರು ಮೂಲತಃ ಅಂಕನಹಳ್ಳಿ ಗ್ರಾಮದವರಾಗಿರುತ್ತಾರೆ. ಸದರಿಯವರ ಹೆಸರಿಗೆ 2 ಎಕರೆ ಜಮೀನು ಇದ್ದು, ಸದರಿ ಜಮೀನಿನ ಸರ್ವೇ ನಂ.160 ಎಂದು ಇರುತ್ತದೆ. ಸದರಿಯವರಿಗೆ 1 ಮನೆ ಇದ್ದು ಹಾಗೂ ಯಾವುದೇ ಖಾಲಿ ನಿವೇಶನ ಇರಲಿಲ್ಲ. ನನ್ನ ತಂದೆಯವರು 2001 ಇಸ್ವೀಯಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ನನ್ನ ತಾಯಿಯವರು ತೀರಿಕೊಂಡು ಸುಮಾರು 6 ರಿಂದ 7 ವರ್ಷಗಳಾಗಿರುತ್ತವೆ. ನನ್ನ ತಾಯಿಯ ಮರಣ ಪ್ರಮಾಣ ಪತ್ರ ಇರುತ್ತದೆ. ನನ್ನ ತಂದೆ ಹಾಗೂ ತಾಯಿ ಮರಣ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಾಯಿ ನನ್ನ ತಂದೆಯ 2 ನೇ ಹೆಂಡತಿ ಎಂದರೆ ಸರಿಯಲ್ಲ. ನನ್ನ ತಂದೆಯವರು ನನ್ನ ತಾಯಿಯನ್ನು ಮದುವೆ ಮಾಡಿಕೊಳ್ಳುವ ಮೊದಲು ಪುಟ್ಟಲಿಂಗಮ್ಮರವರನ್ನು ಮದುವೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ನಾಗಮ್ಮ ಮತ್ತು ಪಾರ್ವತಮ್ಮ ಎನ್ನುವ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆಯವರು ತಮ್ಮ ಜೀವಿತಾವಧಿಯಲ್ಲಿ ನಾಗಮ್ಮ ಮತ್ತು ಪಾರ್ವತಮ್ಮರವರನ್ನು ತುರಗನೂರು ಗ್ರಾಮದ ನಿವಾಸಿಗಳಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರಿಗೆ ಆಸ್ತಿಯಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ನಾನು ನನ್ನ ತಂದೆಗೆ ಮೊದಲನೇ ಹೆಂಡತಿ ಮತ್ತು ಮಕ್ಕಳು ಇರಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಂದೆಗೆ ಬಂದಿರುವ ದರಕಾಸ್ತು ಜಮೀನು ಆಗಿರುತ್ತದೆ. ನಾನು ದರಕಾಸ್ತು ದಾಖಲೆಯನ್ನು ನೋಡಿರುವುದಿಲ್ಲ. ಸದರಿ ಆಸ್ತಿ ದರಕಾಸ್ತು ಮೂಲಕ ಬಂದಿರುತ್ತದೆ ಎಂದು ನನ್ನ

ತಂದೆಯವರು ತಿಳಿಸಿದ್ದರು. ಸದರಿ ವಿಚಾರದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದರಕಾಸ್ತು ದಾಖಲೆ ನನ್ನ ಮನೆಯಲ್ಲಿ ಇರುತ್ತದೆ. ಮಲ್ಲಪ್ಪರವರು ನನ್ನ ತಮ್ಮ ಆಗಬೇಕು. ಸದರಿಯವರಿಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ಸದರಿಯವರು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ.

ನನ್ನ ತಾಯಿ ಮಲ್ಲಮ್ಮರವರಿಗೆ 4 ಜನ ಹೆಣ್ಣು ಮಕ್ಕಳು ಎಂದರೆ ಸಾಕ್ಷಿ 3 ಜನ ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ನಾನು, ನೀಲಮ್ಮ ಮತ್ತು ಶಂಕರಮ್ಮ ಆಗಿರುತ್ತೇವೆ. ನೀಲಮ್ಮರವರು ಮದುವೆ ಆಗಿರಲಿಲ್ಲ. ನೀಲಮ್ಮ ಅಲ್ಲದೇ ನನಗೆ ನಾಗರತ್ನ ಎನ್ನುವ ಸಹೋದರಿ ಇದ್ದರು ಎಂದರೆ ಸರಿಯಲ್ಲ. ವಾದ ಪತ್ರದಲ್ಲಿರುವ ವಂಶ ವೃಕ್ಷವನ್ನು ನಾನೇ ಹೇಳಿ ಬರೆಸಿರುತ್ತೇನೆ.ನಾನು ಬರೆಸಿರುವ ವಂಶ ವೃಕ್ಷದಲ್ಲಿ ನಾಗರತ್ನ ಎನ್ನುವ ತಂಗಿ ಇದ್ದರು ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನೀಲಮ್ಮ ಮತ್ತು ನಾಗರತ್ನ ರವರಿಗೆ ಮದುವೆ ಆಗಿದ್ದು, ಸದರಿಯವರಿಗೆ ಮಕ್ಕಳು ಇದ್ದರು ಎಂದರೆ ಸರಿಯಲ್ಲ. ಸದರಿಯವರ ಮಕ್ಕಳಿಗೆ ಆಸ್ತಿಯಲ್ಲಿ ಹಿಸ್ಸೆ ಕೊಡಬೇಕಾಗುತ್ತದೆ ಅವರುಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಶಂಕರಮ್ಮ ಅನೋನ್ಯವಾಗಿರುತ್ತೇವೆ ಎಂದರೆ ಸರಿ. ನಾನು ಸುಳ್ಳು ಸಂಗತಿಯ ಆಧಾರದ ಮೇಲೆ ದಾವೆ ಹಾಕುತ್ತಿದ್ದೇನೆ ಎಂದು ತಿಳಿದ ಕಾರಣ ಶಂಕರಮ್ಮ ಈ ದಾವೆಯಲ್ಲಿ ಪಕ್ಷಗಾರರಾಗಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಮ್ಮ ಮಲ್ಲಪ್ಪರವರು ದಿ.11.03.2003 ರಲ್ಲಿ ಸರ್ವೇ ನಂ163/3 ರಲ್ಲಿ 15 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಮಲ್ಲಪ್ಪರವರು ದಿ.30.06.2003 ರಂದು ಅದೇ ಸರ್ವೇ ನಂಬರನಲ್ಲಿ 5 ಗುಂಟೆ ಜಮೀನನ್ನು 6ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾರಾಟದಂತೆ 6ನೇ ಪ್ರತಿವಾದಿಯು ಖರೀದಿ ಮಾಡಿದ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಕಂದಾಯ ಪಾವತಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಕುವ ಮುನ್ನ ನಾನು ಕಂದಾಯ ಇಲಾಖೆಯಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ಋಣಭಾರ ರಾಹಿತ್ಯ ಪತ್ರಗಳನ್ನು ನೋಡಿರುವುದಿಲ್ಲ.

ನಾನು ವಾದ ಪತ್ರದ ಸಂಗತಿಗಳನ್ನು ವಕೀಲರಿಗೆ ಹೇಳಿ ಬರೆಸಿರುತ್ತೇನೆ. ವಾದಪತ್ರದ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಾನು ತಿಳಿಸಿರುವ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿರುವುದಿಲ್ಲ. ಆಸ್ತಿಗಳನ್ನು 6 ನೇ ಪ್ರತಿವಾದಿಯು ಖರೀದಿ ಮಾಡಿದ ನಂತರ ಸದರಿ ಆಸ್ತಿಯ ಸರ್ವೇ ನಂ.160/13 ಎಂದು ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಸರ್ವೇ ನಂ.160 ರಲ್ಲಿ ನನ್ನ ತಂದೆಯ ಭಾಗಕ್ಕೆ 2 ಎಕರೆ ಇತ್ತು. ಪ್ರಸ್ತುತ ಅವರ ಹೆಸರಿಗೆ 1 ಎಕರೆ ಜಮೀನು ಮಾತ್ರ ಇರುತ್ತದೆ. ಉಳಿದ ಜಮೀನನ್ನು ಮಲ್ಲಪ್ಪರವರು ಮಾರಾಟ ಮಾಡಿರುತ್ತಾರೆ. ಮಲ್ಲಪ್ಪರವರು 3 ಬಾರಿ ಆಸ್ತಿಯನ್ನು 6 ನೇ ಪ್ರತಿವಾದಿಯ ಹೆಸರಿಗೆ ಮಾರಾಟ ಮಾಡಿರುತ್ತಾರೆ. ಸದರಿಯವರು 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. 6 ನೇ ಪ್ರತಿವಾದಿಗೆ ಒಟ್ಟು 20 ಗುಂಟೆ ಮಾತ್ರ ಕ್ರಯ ಆಗಿರುತ್ತದೆ ಎಂದರೆ ಸಾಕ್ಷಿಯು 1 ಎಕರೆ ಕ್ರಯವಾಗಿರುತ್ತದೆ ಎಂದು ನುಡಿಯುತ್ತಾರೆ. ಮಲ್ಲಪ್ಪ ಮತ್ತು ನಮ್ಮ ತಂದೆ 20 ಗುಂಟೆ ಜಮೀನನ್ನು ತುರಗನೂರು ಗ್ರಾಮದ ಶಂಕರೇಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ.160/3 ಕ್ಕೆ ಸಂಬಂಧಿಸಿದಂತೆ ನಾನು ಪಹಣಿ ಪತ್ರಿಕೆಗಳನ್ನು ಇಂಡೆಕ್ಸ ಆಫ್ ಲ್ಯಾಂಡ ಮತ್ತು ಋಣಭಾರ ರಾಹಿತ್ಯ ಪತ್ರಗಳನ್ನು ನೋಡಿರುವುದಿಲ್ಲ.

ನಾನು ನನ್ನ ಸಹೋದರಿಯರು ಮತ್ತು ಅವರ ಮಕ್ಕಳನ್ನು ಹಾಗೂ ಕ್ರಯದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರುಗಳಿಗೆ ವಿಭಾಗದಲ್ಲಿ ಭಾಗ ತಪ್ಪಿಸಲು ಹಾಗೂ ಮೋಸ ಮಾಡಲು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದು 8 ನೇ ಪ್ರತಿವಾದಿಯಾದ ನನ್ನ ತಂಗಿ ಯಾವುದೇ ಪ್ರತಿವಾದಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಖರೀದಿ ಮಾಡಿದ 20 ಗುಂಟೆ ಜಮೀನಿನಲ್ಲಿ ಭಾಗ ಕೇಳುವ ಹಕ್ಕು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು 6 ನೇ ಪ್ರತಿವಾದಿಯವರನ್ನು ಹೆದರಿಸಿ ಅವರಿಂದ ಹಣ ಲಪಟಾಯಿಸಬೇಕೆಂದು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**